**ವಿಧಾನ ಪರಿಷತ್ತು ಮಾನ್ಯ ಸದಸ್ಯರಾದ ಶ್ರೀ ಟಿ.ಎ. ಶರವಣ ರವರು ನಿಯಮ-330 ರಲ್ಲಿ ಮಂಡಿಸಿರುವ ಸೂಚನೆಗೆ ಕುರಿತು.**

56

**ಪ್ರಶ್ನೆ** ಕರ್ನಾಟಕ ರಾಜ್ಯದಲ್ಲಿ ಚಿನ್ನಾಭರಣ ಮಾಲೀಕರಿಗೆ ಹಾಗೂ ವ್ಯಾಪಾರಸ್ಥರಿಗೆ ವಂಚನೆ, ಮೋಸ, ಕಳ್ಳತನ, ದರೋಡೆ ಆದ ಸಂದರ್ಭದಲ್ಲಿ ಪೊಲೀಸರಿಗೆ ದೂರು ನೀಡಿದರೂ ಕಾನೂನು ಕ್ರಮ ಸರಿಯಾಗಿ ಜರುಗಿಸದೆ, ಸಹಕರಿಸದೆ ಅಪರಾಧಿಗಳಿಂದ ಆಭರಣಗಳನ್ನು ರಿಕವರಿ ಮಾಡದೆ ತೊಂದರೆಯಾಗಿರುವ ಕುರಿತು.

**ಉತ್ತರ:** ಕರ್ನಾಟಕ ರಾಜ್ಯದಲ್ಲಿ ಚಿನ್ನಾಭರಣ ಮಾಲೀಕರು ಹಾಗೂ ವ್ಯಾಪಾರಸ್ಥರು ವಂಚನೆ, ಮೋಸ, ಕಳ್ಳತನ, ದರೋಡೆ ಕೃತ್ಯಗಳಿಗೆ ಒಳಪಟ್ಟು ಈ ಕುರಿತು ದೂರುಗಳನ್ನು /ಪ್ರಕರಣಗಳನ್ನು ದಾಖಲಿಸಲು ಪೊಲೀಸ್ ಠಾಣೆಗಳಿಗೆ ಬಂದಾಗ ಸದರಿ ದೂರುಗಳನ್ನು ನಿಯಮಾನುಸಾರ ಸ್ವೀಕರಿಸಿ, ಕೂಡಲೇ ಯಾವುದೇ ವಿಳಂಬಕ್ಕೆ ಅವಕಾಶ ನೀಡದೇ ಪರಿಶೀಲಿಸಿ, ಸಂಬಂಧಪಟ್ಟ ಕಾನೂನು/ಕಾಯ್ದೆಗಳ ಕಲಂಗಳಡಿಯಲ್ಲಿ ಮೊಕದ್ದಮೆಗಳನ್ನು ದಾಖಲಿಸಿ, ನಿಯಮಾನುಸಾರ ತನಿಖೆಯನ್ನು ಕೈಗೊಳ್ಳಲಾಗುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ದೂರುಗಳನ್ನು ಸ್ವೀಕರಿಸಿ, ದಾಖಲಿಸಿರುವ ಪ್ರಕರಣಗಳ ಸಂಖ್ಯೆ ಮತ್ತು ಅವುಗಳ ಪೈಕಿ ಪತ್ತೆ ಹಚ್ಚಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ:-

| ವರ್ಷ | ದಾಖಲಿಸಿರುವ ಪ್ರಕರಣಗಳ ಸಂಖ್ಯೆ | | | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | | |
|---|---|---|---|---|---|---|
| | ವಂಚನೆ/ಮೋಸ | ಕಳ್ಳತನ | ದರೋಡೆ | ವಂಚನೆ/ಮೋಸ | ಕಳ್ಳತನ | ದರೋಡೆ |
| 2021 | 33 | 36 | 4 | 22 | 22 | 4 |
| 2022 | 45 | 45 | 5 | 32 | 26 | 5 |
| 2023 | 52 | 84 | 4 | 37 | 47 | 3 |
| 2024 | 50 | 81 | 6 | 25 | 39 | 6 |

ಚಿನ್ನಾಭರಣ ಮಾಲೀಕರು/ ವ್ಯಾಪಾರಸ್ಥರು ದೂರು ನೀಡಲು ಪೊಲೀಸ್ ಠಾಣೆಗೆ ಬಂದಾಗ ದೂರುಗಳನ್ನು ನಿಯಮಾನುಸಾರ ಸ್ವೀಕರಿಸದೆ ಇರುವ ಘಟನೆಗಳು ಕಂಡುಬಂದಿರುವುದಿಲ್ಲ. ಕರ್ತವ್ಯದಲ್ಲಿ ನಿರ್ಲಕ್ಷತೆ ಅಥವಾ ಪೊಲೀಸ್ ಕಾರ್ಯಚಟುವಟಿಕೆಯಲ್ಲಿ ಕಾನೂನು ಉಲ್ಲಂಘನೆಯು ಕಂಡುಬಂದಲ್ಲಿ ಅಂತಹ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ನಿಯಮಗಳಡಿಯಲ್ಲಿ ಸೂಕ್ತ ಕ್ರಮಜರುಗಿಸಲಾಗುವುದು.

**ವಂಚನೆ, ಮೋಸ, ಕಳ್ಳತನ, ದರೋಡೆ ಮುಂತಾದ ಅಪರಾಧ ಪ್ರಕರಣಗಳು ವರದಿಯಾದಾಗ ತನಿಖೆಯನ್ನು ಕೈಗೊಳ್ಳುವಾಗ ಈ ಕೆಳಕಂಡ ತನಿಖಾ ಕ್ರಮಗಳನ್ನು ಅನುಸರಿಸಿ ಪ್ರಕರಣಗಳನ್ನು ಪತ್ತೆ ಹಚ್ಚಲಾಗುತ್ತದೆ:-**

- ದೂರಿನ ಸ್ವರೂಪ, ಅಪರಾಧಕ್ಕೆ ಸಂಬಂಧಿಸಿದ ಮಾಹಿತಿ.
- ಸಾಕ್ಷಿಧಾರರ ಪೂರ್ಣ ಮಾಹಿತಿ ಪಡೆದು ದೂರಿಗೆ ಸಂಬಂಧಿಸಿದ ಪೂರಕ ಫೋಟೊ, ವಿಡಿಯೋ ಸಂಗ್ರಹಿಸುವುದು.
- ಸ್ಥಳ ಪರಿಶೀಲನೆ/ಪಂಚನಾಮೆ, ದಾಖಲಾತಿಗಳ ಪರಿಶೀಲನೆ/ ಸಂಗ್ರಹಣೆ, ಸಾಕ್ಷಿಧಾರರ ವಿಚಾರಣೆ ಕೈಗೊಳ್ಳುವುದು.
- ದೂರುದಾರರು ಮತ್ತು ಆರೋಪಿಗಳ ಹಿನ್ನೆಲೆ/ ಅಪರಾಧ ದಾಖಲಾತಿಗಳನ್ನು ಪರಿಶೀಲಿಸುವುದು.
- ಕೃತ್ಯಕ್ಕೆ ಸಂಬಂಧಿತ ವೈದ್ಯಕೀಯ ದಾಖಲಾತಿಗಳನ್ನು ಸಂಗ್ರಹಿಸಿ ಕಾನೂನು ತಜ್ಞರಿಂದ ದಾಖಲಾತಿಗಳ ಪರಿಶೀಲನೆ ಹಾಗೂ ಸಲಹೆಗಳನ್ನು ಪಡೆದುಕೊಳ್ಳುವುದು.
- ದೂರಿನ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವುದು.

**ಕಳ್ಳತನ ದರೋಡೆ ಮುಂತಾದ ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವಂತೆ ಚಿನ್ನಾಭರಣದ ಅಂಗಡಿ ಮಾಲೀಕರಿಗೆ ಹಾಗೂ ವ್ಯಾಪಾರಸ್ಥರಿಗೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸುವಂತೆ ಅರಿವು ಮೂಡಿಸಲಾಗಿದೆ:-**

1. ಚಿನ್ನಾಭರಣದ ಅಂಗಡಿ ಮಾಲೀಕರುಗಳು ಅಂಗಡಿಗಳಲ್ಲಿ ಸೈರನ್‌ಗಳನ್ನು ಅಳವಡಿಸುವುದು ಮತ್ತು ಸೈರನ್‌ಗಳನ್ನು ಸುಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸಿಕೊಳ್ಳುವುದು.
2. ಚಿನ್ನಾಭರಣದ ಅಂಗಡಿಗಳಿಗೆ ಗ್ರಾಹಕರು ಪ್ರವೇಶಿಸುವ ಸ್ಥಳದಿಂದ ಪ್ರತಿಯೊಂದು ಸ್ಥಳಗಳಲ್ಲಿ ಸಿಸಿ ಟಿ.ವಿ.ಗಳನ್ನು ಅಳವಡಿಸಿ, ಅವುಗಳ ವೀಕ್ಷಣೆಗೆ ಒಬ್ಬ ನೌಕರನನ್ನು ನೇಮಕಗೊಳಿಸುವುದು.
3. ಪರಿಚಿತರನ್ನು ಮತ್ತು ನಂಬಿಗಸ್ಥರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದು, ಕೆಲಸಗಾರರ ಫೋಟೋ, ಸರಿಯಾದ ಹೆಸರು, ವಿಳಾಸ ಪಡೆದು ಪೊಲೀಸ್ ಪರಿಶೀಲನೆಯಾದ ನಂತರ ನೇಮಿಸಿಕೊಳ್ಳುವುದು.
4. ಭದ್ರವಾದ ಆಧುನಿಕ ತಿಜೋರಿಗಳನ್ನು ಉಪಯೋಗಿಸಿ, ಅಂಗಡಿಗಳಲ್ಲಿ ಸಿಸಿ ಟಿ.ವಿ.ಕ್ಯಾಮರಾಗಳನ್ನು ಅಳವಡಿಸಿಕೊಳ್ಳುವುದು ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಿಸಿಕೊಳ್ಳುವುದು.
5. ಗ್ರಾಹಕರ ಚಲನವಲನಗಳ ಮೇಲೆ ನಿಗಾ ವಹಿಸಿ ಸಂಶಯ ಕಂಡುಬಂದಲ್ಲಿ ಪೊಲೀಸ್ ಸಹಾಯವಾಣಿ/ಪೊಲೀಸ್ ನಿಯಂತ್ರಣ ಕೊಠಡಿ/112 ಕ್ಕೆ ಕರೆ ಮಾಡುವುದು.

ಸಂಖ್ಯೆ: ಹೆಚ್‌ಡಿ 35 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು